## ಹಳದಿ ನಾಯಿಕೊಡೆ



ಪ್ರಕೃತಿಯಲ್ಲಿ ಏನೆಲ್ಲಾ ಚಿತ್ರ–ವಿಚಿತ್ರಗಳು ಕಾಣಸಿಗುತ್ತವೆ ಎನ್ನುವುದಕ್ಕೆ ಈ ಹಳದಿ ಬಣ್ಣದ ನಾಯಿಕೊಡೆ ಸಾಕ್ಷಿ. ನಮ್ಮ ಮಲೆನಾಡಿನ ಬಹುತೇಕ ಕಡೆ ಮಳೆಗಾಲದ ಆರಂಭವಾದ ಕೆಲ ದಿನಗಳಲ್ಲಿ ಈ ತರಹದ, ತರಾವರಿಯ ನಾಯಿಕೊಡೆ ಜಾತಿಯ ಸಸ್ಯಗಳು ಜನ್ಮತಾಳುತ್ತವೆ. ಇವುಗಳು ಅಣಬೆ ಜಾತಿಯ ಸಸ್ಯಗಳಾದರೂ ಇವು ಅಣಬೆಯಲ್ಲ. ನೋಡಲು ಆಕರ್ಷಕವಾಗಿರುವ ಇವುಗಳಲ್ಲಿ ಕೆಲವು, ಜನ್ಮತಳೆದ ಮೂರರಿಂದ ಐದು ದಿನಗಳವರೆಗೆ ಬದುಕಿರುತ್ತವೆ. ನಮ್ಮ ಮಲೆನಾಡಿನ ಭಾಗದಲ್ಲಿ ಸಾಮಾನ್ಯವಾಗಿ ನಾಯಿಕೊಡೆ ಅಥವಾ ಅಣಬೆ ಬಿಳಿ ಬಣ್ಣದಲ್ಲಿರುತ್ತವೆ. ಈ ರೀತಿ ಹಳದಿ ಬಣ್ಣದಲ್ಲಿರುವುದು ಅಪರೂಪದಲ್ಲಿ ಅಪರೂಪ. ಏಕೆಂದರೆ ಊರಿನ ಹಿರಿಯ ರೈತರನ್ನು ಇದರ ಬಗ್ಗೆ ಕೇಳಿದರೆ 'ಇದುವರೆಗೂ ನಾವು ಈ ರೀತಿ ಹಳದಿ ಬಣ್ಣದ ಅಣಬೆ ನೋಡಿಲ್ಲ. ಇದು ಆಶ್ಚರ್ಯ ಮತ್ತು ಅಪರೂಪ' ಎಂದೇ ಹೇಳುತ್ತಾರೆ. ಆದರೆ ಯಾರೋ ಮಾಯಗಾರ ಬಣ್ಣ ಬಳಿದಂತೆ ಕಾಣುವ, ಇಂಥ ನಾಯಿಕೊಡೆ ಅಥವಾ ಅಣಬೆ, ಕಾಡಿನ ಮಧ್ಯ, ಪೊದೆ ಸಸ್ಯಗಳ ಕೆಳಭಾಗದಲ್ಲಿ ಪ್ರತಿ ವರ್ಷವೂ ಹುಟ್ಟಿ ಸಾಯಬಹುದು. ಅವುಗಳು ನಮ್ಮ ಕಣ್ಣಿಗೆ ಕಾಣದಿರಬಹುದಷ್ಟೆ.

—ಹೆಚ್.ಈ. ಅರುಣ್ ಕುಮಾರ್, ಹುರುಳಿ



## ಮೊಬೈಲ್ ಡೈರಿ

ಇತ್ತೀಚೆಗೆ ಮಹಾರಾಷ್ಟ್ರ ರಾಜ್ಯದ ಔರಂಗಾಬಾದ್ ಪಟ್ಟಣಕ್ಕೆ ಹೋಗಿದ್ದೆ. ಅಲ್ಲಿ ನಾನಿದ್ದ ವಸತಿಗೃಹದ ಸಮೀಪದಲ್ಲಿ ದಿನಾಲೂ ನಸುಕಿನಲ್ಲಿಯೇ ಒಂದು ವಾಹನ ಬಂದು ನಿಲ್ಲುತ್ತಿತ್ತು. ಆ ವಾಹನದಿಂದ ಅಲ್ಲಿಯ ಸುತ್ತಮುತ್ತಲಿನ ಜನ ದಿನಾಲೂ ಹಾಲು ತೆಗೆದುಕೊಂಡು ಹೋಗುತ್ತಿದ್ದರು. ನಾನು ಇದನ್ನು ದಿನಾಲೂ ವಸತಿ ಗೃಹದ ಕಿಟಕಿಯಿಂದ ಕುತೂಹಲದಿಂದ ನೋಡುತ್ತಿದ್ದೆ. ಒಂದು ದಿನ ಆ ವಾಹನವನ್ನು ನೋಡಲು ಬೆಳಿಗ್ಗೆ ಹೋದೆ. ಅದೊಂದು ಮೊಬೈಲ್ ಹಾಲಿನ ಡೇರಿ ಆಗಿತ್ತು. ಅದರ ಡ್ರೈವರ್ ಮತ್ತು ಮಾಲೀಕರಾದ ಬಾಳಾಸಾಹೇಬರನ್ನು ಮಾತಾಡಿಸಿದೆ. ನನಗೆ ಬಾಳಾಸಾಹೇಬ ಇದರ ಪ್ರಯೋಜನ ವಿವರಿಸಿದರು. ಈ ಹಾಲಿನ ಡೇರಿಯಿಂದ ಗ್ರಾಹಕರಿಗೆ ಒಳ್ಳೆಯ ಮತ್ತು ತಾಜಾ ಹಾಲು ಮನೆ ಮುಂದೆಯೆ ದೊರಕುತ್ತದೆ. ಇದರ ಮತ್ತೊಂದು ಅತಿ ಉತ್ತಮ ಪ್ರಯೋಜನ ಎಂದರೆ ಪ್ಲಾಸ್ಟಿಕ್ ಉಪಯೋಗ ತಪ್ಪಿಸಿ ಪರಿಸರ ಮಾಲಿನ್ಯ ತಡೆಯಬಹುದು.

—ರವಿಶಂಕರ ವಿ ಕೋರಗಲ್, ಬೆಳಗಾವಿ

## ಬಹದ್ದೂರ ಕೋಟೆ

ಕೊಪ್ಪಳ ನಗರದಿಂದ 5 ಕಿ.ಮೀ. ದೂರದಲ್ಲಿರುವ ಬಹದ್ದೂರ ಬಂಡೆ ಗ್ರಾಮದಲ್ಲಿನ ಕೋಟೆ, ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿ ನಿಂತಿದೆ. ಇತಿಹಾಸ ಸಾರುವ ಈ ಕೋಟೆ ರಕ್ಷಣೆಯಿಲ್ಲದೆ ಸೊರಗುತ್ತಿರುವುದು ಎಲ್ಲರೂ ತಲೆ ತಗ್ಗಿಸಬೇಕಾದ ವಿಷಯ. ಬಹದ್ದೂರ ಬಂಡೆ ಕೋಟೆಯಲ್ಲಿ ಹಲವಾರು ದ್ವಾರಗಳಿವೆ, ಒಂದು ಕಡೆ ದ್ವಾರಕ್ಕೆ ಹೊತ್ತಿಕೊಂಡು ರಕ್ಷಣಾ ಗೋಡೆ ಕುಸಿದು, ಚಿಕ್ಕದ್ವಾರದಿಂದ ಸಾಗುವುದಲ್ಲದೆ, ಬಿದ್ದಿರುವ ಕಲ್ಲುಗಳು ಮೇಲೆ ಕಾಲಿರಿಸಿ ಮುಂದೆ ನಡೆಯಬೇಕಾದ ಸ್ಥಿತಿ ಇತಿಹಾಸ ಪ್ರಿಯರಿಗೆ ಮತ್ತು ಪ್ರವಾಸಿಗರಿಗೆ ಬಂದಿದೆ. ನಿಧಿ ಆಸೆಗಾಗಿ ಹಲವಾರು ಕಡೆ ನಿಧಿಗಳ್ಳರು ಮಾಡಿದ ಹಾವಳಿ ಕಾಣಸುತ್ತವೆ. ಈಗಲಾದರೂ ಸಂಬಂಧಪಟ್ಟವರು ಎಚ್ಚೆತ್ತುಕೊಂಡು ಸಂರಕ್ಷಿಸಿ, ಚೊಕ್ಕವಾಗಿಟ್ಟುಕೊಂಡರೆ ಪ್ರವಾಸಿ ತಾಣವಾಗುವ ಎಲ್ಲ ಲಕ್ಷಣಗಳು ಬಹದ್ದೂರ ಬಂಡೆ ಕೋಟೆಗಿದೆ.

—ರೇಖಾನಾಯಕ ಎನ್. ಡೊಳ್ಳಿನ, ಕೊಪ್ಪಳ

